# ವ್ಯಾಪಾರ

ನನ್ನ ದಿನದ ವ್ಯಾಪಾರ ಶುರು
ನಿನ್ನ ಜೀವನದ ವ್ಯಾಪಾರವೇ ಮುಗಿಯಿತೇನಜ್ಜಿ?
ತಳ್ಳುಗಾಡಿಯಲಿ ಸಾಗಿದೆ ನನ್ನ ಬದುಕು
ನೀನು ಬದುಕನ್ನು ತಳ್ಳಿಯೇ ಬಿಟ್ಟೆಯಾ ಅಜ್ಜಿ?

ನಿನ್ನ ಕಣ್ಣುಗಳಲ್ಲಿ ಮಡುಗಟ್ಟಿರುವುದು
ನೋವೋ? ನಿರಾಸೆಯೋ? ಸಂತೃಪ್ತಿಯೋ?
ಕಳೆದ ನೆನ್ನೆಯ ಸವಿ ನೆನಪುಗಳೋ?
ಬಾರದ ನಾಳೆಯ ನೆರಳುಗಳೋ?

ನಾನೂ ಪೂರ್ವಕ್ಕೇ ಸರಿಯುತ್ತಿದ್ದೇನೆ
ಮುಂದುವರಿಯುತ್ತಿದ್ದೇನೆ
ನಾಳೆಗಳ ಬಗ್ಗೆ ಭರವಸೆಗಳನ್ನೇ ಹೊತ್ತಿದ್ದೇನೆ.

ನಿನ್ನ ಮುಗಿದುಹೋಗಿರಬಹುದಾದ ಅಧ್ಯಾಯ
ನನಗೆ ಧೈರ್ಯವನ್ನೇ ನೀಡುತ್ತಿದೆ
ಬದುಕಲ್ಲಿ ಗೆದ್ದರೂ ಸೋತರೂ
ಸಾವಂತೂ ನಿಶ್ಚಿತ, ಅಲ್ಲವೇ?

**● ಸೌಮ್ಯಶ್ರೀ ಗೋಣೀಬೀಡು**



# ಗೆರೆಗಳು

ಆ ಸುಕ್ಕುಗಳು ಮರೆಸಿರುವ ಬಿಕ್ಕುಗಳ
ಅರಿವಿದೆಯಾ?
ಮುರಿದ ಕುರ್ಚಿಯಲೂ
ಮೂರು ಕಾಸು ಬಯಸುವ ನೀನು
ಅರಿತಿದ್ದೀಯಾ ಆ ದೃಷ್ಟಿಯ
ನೋವಿನ ನೆನಹುಗಳ
ಆ ಮುಖದ ಗೆರೆಗಳ ಹಿಂದಿನ
ಬರೆಗಳ.....
ಮೂರು ಗಾಲಿಯ ಮೇಲೆ
ಓಡುವ ನಿನ್ನ ಈ ಬದುಕ ಗಾಡಿ

ನೂರು ಅನುಭವಗಳಿಗೆ
ತೆರೆದುಕೊಂಡ ಮುದಿ ಜೀವವ ನೋಡಿ
ಏನ ಹೇಳುತಿದೆ?
ಹಸಿವು, ದಾಹ, ನಿದ್ರೆ, ಮೋಹ ನಮ್ಮ
ಕೈ ಅಳತೆಗೆ ತಕ್ಕಂತೆ
ಅವರದು ಅವರಿಗೆ ನಿನ್ನದು ನಿನಗೆ
ಇನ್ನೇಕೆ ಚಿಂತೆ?
ನಾಳಿನದು ಯಾಕಂತೆ?
ಸಮಯ ಮುಗಿದೊಡೆ ಹೊರಡು
ಒಗೆದಿಲ್ಲೇ ಕಂತೆ!

**● ತಲಕಾಡು ಶ್ರೀನಿಧಿ**